# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ ನಂ. 1233-2016** **ಪಿ. ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಟಿ.ಎನ್.ಮಧುಸೂದನ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 02-03-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಇ.ಎಂ ವಕೀಲರಿಂದಃ**

5. ನನ್ನನ್ನು ನಂಜನಗೂಡಿನ ಮಧು ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ. ನಾನು ಆರೋಪಿ ಮಾವ ಬಿ.ಎಸ್ ಚೆನ್ನಪ್ಪ ಎಂಬುವವರಿಂದ ರೂ.2,00,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಚೆನ್ನಪ್ಪ ರವರ ಬ್ಯಾಂಕ್ ಖಾತೆಗೆ ನಾನು ಸಾಲವನ್ನು ಜಮೆ ಮಾಡುತ್ತಾ ಬಂದಿದ್ದು ಕೊನೆಯದಾಗಿ ದಿ.14-02-2016 ರಂದು ಸದರಿ ಸಾಲದ ಹಣವನ್ನು ಜಮೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸಾಲವನ್ನೇ ಪಡೆದುಕೊಂಡಿಲ್ಲ, ಇನ್ನಾ ಜಮೆ ಮಾಡವ ವಿಚಾರ ಇನ್ನೇಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ದಿ.31-08-2015 ರಂದು ಆರೋಪಿ ನಾನು ಅವರ ಮಾವನಿಂದ ಪಡೆದಿದ್ದ ರೂ.2,00,000/- ಸಾಲದ ಬಾಬ್ತು ನನ್ನ ವಿರುದ್ಧ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ದಿ.03-11-2015 ರಂದು ನಾನು ಸದರಿ ಠಾಣೆಗೆ ಹಾಜರಾಗಿ ಆರೋಪಿ ಮಾವನಿಂದ ಪಡೆದ ಸಾಲವನ್ನು ಮರುಪಾವತಿ ಮಾಡವುದಾಗಿ ಒಪ್ಪಿ ಹೇಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

6. 2006 ನೇ ಇಸವಿಯಲ್ಲಿ ನಾನು ಮೈಸೂರು ಜಿಲ್ಲಾ ಪತ್ರಕರ್ತರ ಸಹಕಾರ ಸಂಘ ನಿಯಮಿತ ಆಶ್ರಯದಲ್ಲಿ ನಿವೇಶನವನ್ನು ಕೊಡಿಸುವುದಾಗಿ ಹೇಳಿ ನಿಪಿ-1 ನ್ನು ಆರೋಪಿಯಿಂದ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ದಿ.09-11-2006 ರಂದು ನಾನು ಆರೋಪಿಗೆ ಪರವಾಗಿ ಸದರಿ ಸಂಸ್ಥೆಗೆ ಅರ್ಜಿಯನ್ನು ಕೂಡ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಆದರೆ ಆರೋಪಿಗೆ ಆ ಸಂಸ್ಥೆಯಿಂದ ನಿವೇಶನ ಮಂಜುರಾಗದ ಕಾರಣ ಅವರು ನನಗೆ ನಿಪಿ-1 ನ್ನು ವಾಪಸ್ಸು ನೀಡುವಂತೆ

ಕೇಳಿದ್ದರು, ಆದರೂ ನಾನು ಅವರಿಗೆ ಹಿಂದಿರುಗಿಸಿ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ದಿ.31-10-2013 ರಲ್ಲಿ ತನ್ನ ನಿಪಿ-1 ಚೆಕ್ಕು ಕಾಣೆಯಾಗಿದೆ ಎಂದು ಹೇಳಿ ಸಿಂಡಿಕೇಟ್ ಬ್ಯಾಂಕಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿವೇಶನ ಕೊಡಿಸುವುದಾಗಿ ಹೇಳಿ ಪಡದಿದ್ದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ನಾನು ಆರೋಪಿಗೆ ವಿರುದ್ಧ ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವತ್ತು ನನ್ನ ಬಳಿ ಬಂದು ರೂ.2,50,000/- ಗಳನ್ನು ಸಾಲವನ್ನು ಪಡೆದುಕೊಂಡಿಲ್ಲ, ನಾನು ಆರೋಪಿ ವಿರುದ್ಧ ಸುಳ್ಳು ಆರೋಪಣೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ನೋಟಿಸ್‌ಗೆ ಜವಾಬು ನೋಟಿಸ್ ನೀಡಿದ್ದಾರೆ ಎಂದರೆ ಸಾಕ್ಷಿ ತಡವಾಗಿ ನೀಡಿದ್ದಾರೆ ಎಂದು ಉತ್ತರಿಸುತ್ತಾರೆ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನಾನು ನಂಜನಗೂಡಿನ ಎನ್.ಜಿ.ಒ ಕಾಲೋನಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನನ್ನ ಸ್ವಂತ ಮನೆಯಲ್ಲಿ ವಾಸವಾಗಿರುತ್ತೇನೆ, ನನ್ನ ಕಚೇರಿಯನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ರೂ.2,50,000/- ಸಲಾವಾಗಿ ನೀಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ರೂ.2,50,000/- ಹಿಂತಿರುಗಿ ಪಡೆದುಕೊಳ್ಳಲು ನಾನು ಈ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಆರ್ಥಿಕ ಲಾಭ ಪಡೆಯಲು ನಾನು ಆರೋಪಿ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**